**CC 1049/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್** 1049/2022

**ಸಿ ಡಬ್ಲ್ಯೂ** -2
**ಪಿ ಡಬ್ಲ್ಯೂ** -3

**ಸಾಕ್ಷಿಯ ಹೆಸರು - ದೇವೇಂದ್ರ**
**ತಂದೆಯ ಹೆಸರು - ಪರಶುರಾಮ**
**ವಯಸ್ಸು -** 46 **ವರ್ಷಗಳು**
**ಉದ್ಯೋಗ - ಆಟೋ ಚಾಲಕ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 23-07-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ **2** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **2(ಸಿ)** ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿಃ **06-03-2022** ರಂದು ಪೋಲಿಸರು ಚಾಸಾ **-1** ರವರ ಮನೆಗೆ ಕರೆದಾಗ ಮಾಡಿರುತ್ತೇನೆ. ಚಾಸಾ-**1** ರವರೊಂದಿಗೆ ಆರೋಪಿ ದಿಃ **05-03-2022** ರಂದು ಗಲಾಟೆ ಮಾಡಿದ್ದರಿಂದ, ಪೋಲಿಸರು ಆ ಗಲಾಟೆ ವಿಚಾರವಾಗಿ ಸ್ಥಳಕ್ಕೆ ಪಂಚನಾಮೆ ಮಾಡಲು ಬಂದಿದ್ದರು. ಪಂಚನಾಮೆ ಮಾಡಿದ ಸ್ಥಳದ ಚೆಕ್ಕು ಬಂದಿ ನನಗೆ ಗೊತ್ತು. ಪೂರ್ವಕ್ಕೆ ಮುಸ್ಲಿಂರೊಬ್ಬರ ಮನೆ, ಪಶ್ಚಿಮಕ್ಕೆ ನಾಗೇಂದ್ರ ರವರ ಮನೆ, ಉತ್ತರಕ್ಕೆ ಓಣಿ ಮತ್ತು ಗೊವಿಂದ ರಾಜರವರ ಮನೆ ಮತ್ತು ದಕ್ಷಿಣಕ್ಕೆ ಅಂಗಡಿಗಳನ್ನು ಕಾಂಪ್ಲೆಕ್ಸ್ ಗಳು ಇರುತ್ತವೆ. ಚೆಕ್ಕು ಬಂದಿಯನ್ನು ಬೆಳಿಗ್ಗೆ

**11.00- 11.30** ಗಂಟೆಯ ಸಮಯದಲ್ಲಿ ಮಾಡಿರುತ್ತಾರೆ. ನಿಪಿಃ **3** ರ ಫೋಟೋವನ್ನು ಆಗಲೇ ತೆಗೆದಿರುತ್ತಾರೆ.

ಈಗ ನಾನು ನೋಡುತ್ತಿರುವ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ನಕಾಶೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **6** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **6(ಎ)** ಎಂದು ಗುರುತಿಸಲಾಯಿತು. ಸದರಿ ನಕಾಶೆಗೆ ಸ್ಥಳದಲ್ಲಿಯೇ ಸಹಿ ಮಾಡಿದ್ದೆ.

## <u>ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಸಿ ಎನ್ ವಕೀಲರಿಂದಃ</u>

ಚಾಸಾ -1 ನನ್ನ ಮನೆ ಪಕ್ಕದವರು. ಚಾಸಾ-1 ರವರು ನನ್ನ ಸಂಬಂಧಿಕರು ಅಂದರೆ ಸರಿ. ಪಂಚನಾಮೆ ಆದ ದಿನದಂದು ನಾನು ಮನೆಯ ಹತ್ತಿರವೇ ಇದ್ದೆ. ಪಂಚನಾಮೆಯನ್ನು ಬರೆದ ಪೋಲಿಸರ ಹೆಸರು ನನಗೆ ನೆನಪಿಲ್ಲ. ಪಂಚನಾಮೆಯನ್ನು ಟೈಪ್ ಮಾಡಿದ್ದರು. ಟೈಪ್ ಮಾಡಿದ ಪೋಲಿಸರ ಹೆಸರು ನನಗೆ ನೆನಪಿಲ್ಲ. ಸದರಿ ಪಂಚನಾಮೆಯನ್ನು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿರುತ್ತಾರೆ. 2-3 ಜನ ಪೋಲಿಸರು ಆ ಸಂದರ್ಭದಲ್ಲಿ ಹಾಜರಿದ್ದರು. ಫೋಟೊ ತೆಗೆದ ಪೋಲಿಸರ ಹೆಸರು ನನಗೆ ಗೊತಿತಲ್ಲ. ಫೋಟೊವನ್ನು ಮೊಬೈಲ್ ಫೋನ್ ನಲ್ಲಿ ತೆಗೆದಿರುತ್ತಾರೆ. ಸದರಿ ಫೋನ್ ಯಾರದ್ದು ಮತ್ತು ಯಾವ ಕಂಪನಿಯದ್ದು ಎಂದು ನನಗೆ ಗೊತಿತಲ್ಲ. ಯಾವ ಉದ್ದೇಶಕ್ಕೆ ಫೋಟೊ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ನಿಪಿಃ 6 ರ ನಕಾಶೆಯನ್ನು ಯಾರು ತಯಾರಿಸಿದರು ಎಂದು ನನಗೆ ಗೊತ್ತಿಲ್ಲ. ಯಾವ ಉದ್ದೇಶಕ್ಕೆ ನಕಾಶೆ ತಯಾರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆ ಆದಾಗ 4-5 ಜನ ಹಾಜರಿದ್ದರು. ಸದರಿಯವರ

ಹೆಸರುಗಳು ನನಗೆ ಗೊತ್ತಿಲ್ಲ. ಪಂಚನಾಮೆಗೆ ನಾನು ಮತ್ತು ಚಾಸಾ -3 ರವರು ಸಹಿ ಮಾಡಿರುತ್ತೇವೆ.

ಪಂಚನಾಮೆಗೆ ಬರಲು ಪೋಲಿಸರು ನೋಟಿಸ್ ನೀಡಿರಲಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, ಚಾಸಾ -1 ರವರು ನನ್ನ ಸಂಬಂ,ಕರಾಗಿರುವುದರಿಂದ ಅವರಿಗೆ ಸಹಾಯ ಮಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಮತ್ತು ನಿಪಿಃ 2 ಕ್ಕೆ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಪಂಚನಾಮೆಯನ್ನು ಎಲ್ಲಿ ಪ್ರಿಂಟ್ ತೆಗೆಯಲಾಯಿತು ಅಂದರೆ ಗೊತಿತಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.